# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ಘಟಕ

ಕವಿಪ್ರನಿನಿ/ಬಿ93/35989/2021-22 C45-15

ನಿಗಮ ಕಾರ್ಯಾಲಯ,
ಕಾವೇರಿ ಭವನ, ಬೆಂಗಳೂರು.
ದಿನಾಂಕ: 20 SEP 2021

## ಸುತ್ತೋಲೆ

ವಿಷಯ: ಕವಿಪ್ರನಿನಿಯ ಜಾಲತಾಣ ಆಧಾರಿತ ಎನ್‌ಡಿಸಿಪಿಎಸ್ ತಂತ್ರಾಂಶದಲ್ಲಿ ಮಾಸಿಕ ಪಿಂಚಣಿ ವಂತಿಗೆ ದಾಖಲಿಸುವ ಕ್ರಮದ ಬಗ್ಗೆ.

******

ಕವಿಪ್ರನಿನಿ ಮತ್ತು ವಿಸಕಂಗಳ ಲೆಕ್ಕಘಟಕದವರು ಕವಿಪ್ರನಿನಿಯ ಜಾಲತಾಣ ಆಧಾರಿತ ಎನ್‌ಡಿಸಿಪಿಎಸ್ ತಂತ್ರಾಂಶದಲ್ಲಿ ಮಾಸಿಕ ಪಿಂಚಣಿ ವಂತಿಗೆ ದಾಖಲಿಸುವ ಕ್ರಮದ ಬಗ್ಗೆ ಹಾಗೂ ಅನುಮೋದನೆ ನೀಡಲು ಸಾಧ್ಯವಾಗದಿರುವ ಬಗ್ಗೆ ಮೌಖಿಕವಾಗಿ ಮತ್ತು ಇ-ಮೇಲ್ ಮುಖಾಂತರ ಮನವಿಗಳನ್ನು ಕೆಇಎನ್‌ಡಿಸಿಪಿಎಸ್ ಘಟಕಕ್ಕೆ ಸಲ್ಲಿಸಿರುತ್ತಾರೆ.

ಕವಿಪ್ರನಿನಿ ಮತ್ತು ವಿಸಕಂಗಳ ಲೆಕ್ಕಘಟಕಗಳು ಪ್ರತಿ ತಿಂಗಳು ಪಿಂಚಣಿ ವಂತಿಗೆ ದಾಖಲಿಸುವಾಗ ಯಾವುದೇ ಕಾರಣದಿಂದ ಅಂದರೆ, ಅಧಿಕಾರಿ/ನೌಕರರಿಗೆ ರಜೆ ಮಂಜೂರಾತಿ/ ರಾಜೀನಾಮೆ/ ಅನಧಿಕೃತ ಗೈರುಹಾಜರಿ/ ಮರಣ/ ವಯೋನಿವೃತ್ತಿ/ ಸ್ವಯಂನಿವೃತ್ತಿ ಮತ್ತು ಇತರೆ ಸೂಕ್ತ ಕಾರಣವನ್ನು ಪಿಂಚಣಿ ವಂತಿಗೆ ದಾಖಲಿಸುವ ನಮೂನೆಯಲ್ಲಿರುವ ಷರಾ ಕಾಲಂನಲ್ಲಿ ಕಡ್ಡಾಯವಾಗಿ ನಮೂದಿಸುವ ಸಲುವಾಗಿ ಪ್ರತ್ಯೇಕ ಕಾಲಂ 'Monthly Contribution not entered' ಅನ್ನು ಜೂನ್-2021 ಮಾಹೆಯಿಂದ ಜಾಲತಾಣದ ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ, ಕವಿಪ್ರನಿನಿ ಮತ್ತು ವಿಸಕಂಗಳ ಎಲ್ಲಾ ಲೆಕ್ಕಘಟಕದವರು ಕವಿಪ್ರನಿನಿಯ ಜಾಲತಾಣ ಆಧಾರಿತ ಎನ್‌ಡಿಸಿಪಿಎಸ್ ತಂತ್ರಾಂಶದಲ್ಲಿ ಮಾಸಿಕ ಪಿಂಚಣಿ ವಂತಿಗೆ ದಾಖಲಿಸುವಾಗ, ಈ ಕೆಳಕಂಡ ಕ್ರಮಗಳನ್ನು ಅನುಸರಿಸುವಂತೆ ಸೂಚಿಸಿದೆ.

1) ನೂತನ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ/ವರ್ಗಾವಣೆಗೊಂಡ ಎಲ್ಲಾ ಅಧಿಕಾರಿ/ನೌಕರರ ಮಾಸಿಕ ಪಿಂಚಣಿ ವಂತಿಗೆಯ ವಿವರಗಳನ್ನು [**'Monthly Contribution'** ಕಾಲಂನಲ್ಲಿ] ಅಥವಾ ಮಾಸಿಕ ಪಿಂಚಣಿ ವಂತಿಗೆ ನೀಡದಿರುವ ವಿವರಗಳನ್ನು [**'Monthly Contribution not entered'** ಕಾಲಂನಲ್ಲಿ] ಕಡ್ಡಾಯವಾಗಿ ನಮೂದಿಸುವುದು. ಇದರಿಂದ, ಸದರಿ ಲೆಕ್ಕಘಟಕದಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು ಅಧಿಕಾರಿ/ನೌಕರರ ಸಂಖ್ಯೆ ತಾಳೆಯಾಗಿ ಅನುಮೋದನೆ ನೀಡಲು ಸಾಧ್ಯವಾಗುವುದು.
2) ನೂತನ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಯಾವುದೇ ಅಧಿಕಾರಿ/ನೌಕರರು ಒಂದು ಲೆಕ್ಕಘಟಕದಿಂದ ಮತ್ತೊಂದು ಲೆಕ್ಕಘಟಕಕ್ಕೆ ವರ್ಗಾವಣೆಯಾದಾಗ, ಆ ಲೆಕ್ಕಘಟಕದಿಂದ ಬಿಡುಗಡೆ ಹೊಂದಿದ ಮಾಹೆಯಲ್ಲಿಯೇ ಕಾರ್ಯವಿಮುಕ್ತಿಗೊಂಡ ದಿನಾಂಕವನ್ನು ನಮೂದಿಸಿ **'Transfer-Out'** ಮಾಡುವುದು.

3) ಒಮ್ಮೆ 'Transfer-Out' ಮಾಡಲಾದ ಅಧಿಕಾರಿ/ನೌಕರರ ಬಾಕಿ ವೇತನ/ಪಿಂಚಣಿ ವಂತಿಗೆ (Arrears) ದಾಖಲಿಸುವ ಸಲುವಾಗಿ 'Transfer-In' ಮಾಡಿಕೊಳ್ಳದೆ, ನೌಕರನು ಹಾಲಿ ಕಾರ್ಯನಿರ್ವಹಿಸುತ್ತಿರುವ ಘಟಕದವರು ಕಾರ್ಯವಿಮುಕ್ತಿ ಹೊಂದಿದ ಘಟಕದಿಂದ ದೃಢೀಕರಣವನ್ನು (NPA) ಪಡೆದು ಬಾಕಿ ವಂತಿಗೆಯನ್ನು **'Arrears Contribution'**ನಲ್ಲಿ ಸಂಬಂಧಪಟ್ಟ ಅಧಿಕಾರಿ/ನೌಕರರಿಗೆ ದಾಖಲಿಸುವುದು.

4) ಯಾವುದೇ ಅಧಿಕಾರಿ/ನೌಕರರ ಪಿಪಿಎ ಖಾತೆಗೆ ಮಾಸಿಕ ಪಿಂಚಣಿ ವಂತಿಗೆಯನ್ನು ದಾಖಲಿಸದೆ ಇದ್ದಲ್ಲಿ, **'Monthly Contribution not entered'** ಕಾಲಂನಲ್ಲಿ ಈ ಕೆಳಕಂಡ ಕಾರಣಗಳನ್ನು ದಿನಾಂಕದ ಸಹಿತ ಪ್ರತ್ಯೇಕವಾಗಿ ದಾಖಲಿಸುವುದು.

ಅ. ವರ್ಗಾವಣೆ

ಆ. ಅನಧಿಕೃತ ಗೈರುಹಾಜರಿ

ಇ. ಮರಣ

ಈ. ವಯೋನಿವೃತ್ತಿ

ಉ. ಸ್ವಯಂ ನಿವೃತ್ತಿ ಅಥವಾ ರಾಜೀನಾಮೆ

ಊ. ಕಡ್ಡಾಯ ನಿವೃತ್ತಿ

ಋ. ಸೇವೆಯಿಂದ ವಜಾಗೊಂಡಾಗ

ಎ. ಇತರೆ

5) ಕವಿಪ್ರನಿನಿ/ಎಲ್ಲಾ ವಿಸಕಂಗಳ ಲೆಕ್ಕಘಟಕದ ಅಧಿಕಾರಿ/ನೌಕರರು ಮರಣ ಹೊಂದಿದಲ್ಲಿ, ಅಂತಹ ಅಧಿಕಾರಿ/ನೌಕರರ ಪಿಪಿಎ ಖಾತೆಗೆ ಮಾಸಿಕ ಪಿಂಚಣಿ ವಂತಿಗೆಯನ್ನು ದಾಖಲಿಸದಿರುವ ಬಗ್ಗೆ **'Monthly Contribution not entered'** ಕಾಲಂನಲ್ಲಿ **'Death'** ಎಂದು ಮರಣ ದಿನಾಂಕದೊಂದಿಗೆ ದಾಖಲಿಸಿ, ತಮ್ಮ ಲೆಕ್ಕಘಟಕದ ಪಿಂಚಣಿ ವಂತಿಗೆಯು ಸರಿಯಿರುವುದನ್ನು ಖಚಿತಪಡಿಸಿಕೊಂಡು, ಸಹಾಯಕ ಲೆಕ್ಕಾಧಿಕಾರಿ ಹಾಗೂ ಲೆಕ್ಕಾಧಿಕಾರಿಯವರು ಅನುಮೋದಿಸುವುದು ನಂತರ ನಿಧನ ಹೊಂದಿರುವ ಅಧಿಕಾರಿ/ನೌಕರರ ಪಿಪಿಎ ಸಂಖ್ಯೆಯನ್ನು **'Expired'** ಎಂದು ನಮೂದಿಸಿ **'Transfer-Out'** ಮಾಡುವುದು.

6) ಕವಿಪ್ರನಿನಿ/ಎಲ್ಲಾ ವಿಸಕಂಗಳ ಅಧಿಕಾರಿ/ನೌಕರರು ಎರವಲು ಸೇವೆ ಆಧಾರದ ಮೇಲೆ ಅನ್ಯ ಇಲಾಖೆಗಳಿಗೆ (ಬಿಎಂಆರ್‌ಸಿಎಲ್, ಬಿಬಿಎಂಪಿ, ಕ್ರೆಡಿಎಲ್, ಇತರೆ ಇಲಾಖೆಗಳಿಗೆ) ನಿಯೋಜನೆಗೊಂಡಲ್ಲಿ **'Reason for Transfer-Out'**ನಲ್ಲಿ **'Deputation'** ಎಂದು ನಮೂದಿಸುವುದು ಹಾಗೂ ಅಧಿಕಾರಿ/ನೌಕರರು ಕವಿಪ್ರನಿನಿ/ವಿಸಕಂಗಳಲ್ಲಿಯೇ ನಿಯೋಜನೆಗೊಂಡಲ್ಲಿ (ಅಂತರ್ ಕಂಪನಿ ನಿಯೋಜನೆ) **'Reason for Transfer-out'**ನಲ್ಲಿ 'Transfer' ಎಂದು ನಮೂದಿಸಿ 'Transfer-Out' ಮಾಡುವುದು.

ಮೇಲಿನ ಅಂಶಗಳನ್ನು ಕವಿಪ್ರನಿನಿ ತಂತ್ರಾಂಶದಲ್ಲಿ ಮಾಹೆಯಾನ ಮಾಸಿಕ ಪಿಂಚಣಿ ವಂತಿಗೆ ದಾಖಲಿಸುವಾಗ ತಪ್ಪದೆ ಪಾಲಿಸಲು ತಿಳಿಸಲಾಗಿದೆ.

ಆರ್ಥಿಕ ಸಲಹೆಗಾರರು,
(ಎನ್‌ಡಿಸಿಪಿಎಸ್)

ಪ್ರತಿಗಳು:

1. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಚೆಸ್ಕಾಂ/ಹೆಸ್ಕಾಂ/ಮೆಸ್ಕಾಂ/ಸೆಸ್ಕ್/ಪಿಸಿಕೆಎಲ್
2. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂಗಳು.

3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಸ್ಕಾಂಗಳು
4. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ವಿಸಕಂ/ಪಿಸಿಕೆಎಲ್
5. ಹಿರಿಯ ಆಪ್ತ ಕಾರ್ಯದರ್ಶಿಗಳು ರವರಿಗೆ ಆದೇಶದ ಪ್ರತಿಯನ್ನು ಕಳುಹಿಸುತ್ತಾ ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು(ಆ&ಮಾ.ಸಂ)/ ನಿರ್ದೇಶಕರು(ಪ್ರಸರಣ)/ ನಿರ್ದೇಶಕರು(ಹಣಕಾಸು), ಕವಿಪ್ರನಿನಿ ರವರ ಗಮನಕ್ಕೆ ತರಲು ವ್ಯವಸ್ಥೆ ಮಾಡುವುದು.

   **ಅಧೀಕ್ಷಕ ಇಂಜಿನಿಯರ್(ಐ.ಟಿ ಮತ್ತು ಎಂ.ಐ.ಎಸ್) ರವರ ಮಾಹಿತಿಗಾಗಿ ಕಳುಹಿಸುತ್ತಾ ಆದೇಶದ ಪ್ರತಿಯನ್ನು www.kptcl.com>eprasarana ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಕ್ತ ವ್ಯವಸ್ಥೆ ಮಾಡುವುದು.**
6. ಎಲ್ಲಾ ಅಧೀಕ್ಷಕ ಇಂಜಿನಿಯರ್/ನಿಯಂತ್ರಣಾಧಿಕಾರಿ, ಕವಿಪ್ರನಿನಿ/ವಿಸಕಂ
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್/ಉಪ ಲೆಕ್ಕನಿಯಂತ್ರಣಾಧಿಕಾರಿ, ಕವಿಪ್ರನಿನಿ/ವಿಸಕಂಗಳು
8. ಎಲ್ಲಾ ಅಧಿಕಾರಿಗಳು, ಕವಿಪ್ರನಿನಿ/ವಿಸಕಂಗಳು